**ಸಿ.ಸಿ. ನಂ. 4622 /2022 ಪಿ.ಡಬ್ಲ್ಯೂ-1 ಸಿಡಬ್ಲ್ಯೂ-3(ಮಹಮ್ಮದ್ ಟೌಪಿಕ್)**

**ಸಾಕ್ಷಿಗೆ ದಿನಾಂಕ 04.08.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎನ್ ಆರ್ ವಕೀಲರಿಂದಃ**

ನಾನು ಹಂಪಾಪುರದಲ್ಲಿ ವಾಸಾವಿರುತ್ತೇನೆ. ಚಾಸಾ 2 ರಿಂದ 7 ರವರು ಎಲ್ಲಾರು ನಮ್ಮ ಗ್ರಾಮದವರಾಗಿರುತ್ತಾರೆ ಎಂದರೆ ಸರಿ. ಆರೋಪಿ ನಾವು ಒಂದೇ ಊರಿನವರು ಆಗಿರುತ್ತೇವೆ. ಚಿಕ್ಕಂದಿಂದಲೂ ಪರಿಚಯ ವಿರುತ್ತಾರೆ. ನನಗೆ ಪೇಸ್ ಬುಕ್ಕ ನಲ್ಲಿ ಸು. 12 ವರ್ಷದಿಂದಲೂ ಅಕೌಂಟ್ ಇರುತ್ತದೆ. ನನಗೆ ಆರೋಪಿ ಪೇಸ್ ಬುಕ್ ನಲ್ಲಿ ಗೆಳೆಯನಾಗಿರುತ್ತಾನೆ. ಎಷ್ಟು ಗೆಳೆಯನಾಗಿರುತ್ತಾನೆಂದು ತಿಳಿದಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಮೊಬೈಲ್ ಸಂಖ್ಯೆ 9986180529 ಅನ್ನು ಬಳಸುತ್ತಿದ್ದಾಗ ಆರೋಪಿಯು ತನ್ನ ಲಕ್ಷ್ಮಿ ನಾರಾಯಣ ಆಜಾದ್ ಎಂಬ ಹೆಸರಿನ ಪೇಸ್ ಅಕೌಂಟಿನಲ್ಲಿ ನಮ್ಮ ಧರ್ಮದ ಬಗ್ಗೆ ಅವಹೇಳನ ಕಾರಿಯಾಗಿ ಹೇಳಿರುತ್ತಾರೆ ಎಂದು ತಿಳಿಸಿದ್ದು, ಸದರಿ ನಂಬರಿನ ಮೊಬೈಲನ್ನು ಪೋಲೀಸರಿಗೆ ತನಿಖೆಯ ಸಮಯದಲ್ಲಿ ನೀಡಿರುವುದಿಲ್ಲ. ಆ ರಿತೀಯಾಗಿ ಆರೋಪಿಯು ಯಾವ ದಿನಾಂಕದಂದು ಆ ರಿತೀಯಾಗಿ ಸಂದೇಶ ಕಳುಹಿಸಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ವಿಷಯವಾಗಿ ನಾನು ಪೋಲೀಸರು ಮುಂದೆ ದೂರನ್ನು ನೀಡಿರುವುದಿಲ್ಲ. ಸದರಿ ವಿಷಯವಾಗಿ ನಮ್ಮ ಊರಿನಲ್ಲಿ ಯಾವುದೇ ಕೋಮು ಸಂಘರ್ಷ ಆಗಿರುವುದಿಲ್ಲ. ಸದರಿ ವಿಷಯವಾಗಿ ನಾವೆಲ್ಲರೂ ಪೋಲೀಸ್ ಠಾಣೆಗೆ ಹೋಗಿ ದಿಃ 20.11.2020 ರಂದು ದೂರು ನೀಡಿರುತ್ತೇವೆ. ಪೇಸ್ ಬುಕ್ ನಲ್ಲಿ ಯಾರ ಹೆಸರಿನಲ್ಲಿ ಯಾದರೂ ನಕಲಿ ಅಕೌಂಟನ್ನು ಸೃಷ್ಟಿ ಸಿ ಸಂದೇಶ ಕಳಿಸಬಹುದು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಯ ಹೆಸರಿನಲ್ಲಿ ಬೇರೆಯವರು ನಕಲಿ ಖಾತೆಯನ್ನು ಸೃಷ್ಟಿಸಿ ಸಂದೇಶವನ್ನು ಅವರ ಖಾತೆಯಲ್ಲಿ ಪ್ರಕಟಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು

ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಂಪಾಪುರ ಗ್ರಾಮದಲ್ಲಿ ಎಲ್ಲಾ ಜಾತಿಯ ಧರ್ಮದ ಜನರು ವಾಸಿಸುತ್ತಾರೆ ಎಂದರೆ ಸರಿ. ಇಲ್ಲಿಯವರಗೂ ಅವರಲ್ಲಿ ಯಾವುದೇ ಕೋಮು ಗಲಬೆ ಆಗಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿಯೂ ಸಹ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಲು ಆ ರೀತಿ ಸಂದೇಶವನ್ನು ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಾನು ಆರೋಪಿ ಸಿರುವಂತೆ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅಧಿಕಾರಿಯವರನ್ನು ಕೇಳಬೇಕು ಎಂದು ನುಡಿಯುತ್ತಾರೆ. ಆರೋಪಿಗೆ ಪೇಸ್ ಬುಕ್ ನಲ್ಲಿ ಲಕ್ಷ್ಮಿ ನಾರಾಯಣ ಎಂಬ ಹೆಸರಿನ ಯಾವುದೇ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ